ಹೊರಟು ಬಂದದ್ದಲ್ಲ. ತಿನ್ನಲು ಏನಾದರೂ ತರುತ್ತೇನೆ ಎಂದು ಹಸಿದ ಮೂರು ಮಕ್ಕಳನ್ನು ಗುಡಿಸಲಲ್ಲಿ ಬಿಟ್ಟು ಬೆಳಿಗ್ಗೆಯೇ ಬಂದಿದ್ದಳಾಕೆ. ರುದ್ರಿಯೂ ರುದ್ರಿಯ ಮಕ್ಕಳೂ ನಿನ್ನೆ ಮಧ್ಯಾಹ್ನ ಗಂಜಿನೀರು ಕುಡಿದದ್ದು. ಅದೂ ಅರ್ಧ ಹೊಟ್ಟೆ. ಸಂಜೆಗೆ ಏನೂ ಇರಲಿಲ್ಲ, ರಾತ್ರಿಗೂ ಇರಲಿಲ್ಲ. ಬೆಳಗ್ಗೆಯೂ ಏನೂ ಇಲ್ಲವೇ ಎಂದು ಅಸಹಾಯಕ ಮುಖ ಹೊತ್ತು ಮೌನಪ್ರಶ್ನೆ ಕೇಳುತ್ತಿದ್ದ ಮಕ್ಕಳಲ್ಲಿ, 'ಈಗ ಏನಾದರೂ ತರುತ್ತೇನೆ' ಎಂದು ಹೇಳಿ ಹೊರಟವಳು. ಗುರುತು ಪರಿಚಯ ಇದ್ದವರಲ್ಲಿ, ಇಲ್ಲದವರಲ್ಲಿ ಕೆಲಸ ಕೇಳಿದಳು, ಸಾಲ ಬೇಡಿದಳು. ಏನೂ ಸಿಗಲಿಲ್ಲ. ದೊಡ್ಡ ಗೇಟಿನ ಮನೆಗಳ ಮುಂದೆ, ಸಣ್ಣ ಗುಡಿಸಲುಗಳ ಮುಂದೆ, ಎಲ್ಲೆಂದರಲ್ಲಿ ನಿಂತು ಬಟ್ಟೆ ತೊಳೆಯುತ್ತೇನೆ, ಪಾತ್ರೆ ತೊಳೆಯುತ್ತೇನೆ ಎಂದಳು. ಯಾವುದೇ ಕೆಲಸವಾದರೂ ಕೊಡಿ ಎಂದು ಬೇಡಿದಳು. ಇದ್ದವರೂ, ಇಲ್ಲದವರೂ ಬೇಡುವವರಿಗೆ ಹೇಳುವಂತೆಯೇ 'ಇಲ್ಲ, ಹೋಗು' ಎಂದೇ ಹೇಳಿದರು. ಕ್ರೂರ ಜಗತ್ತು, ಹಸಿದವರನ್ನು ಕೇಳುವವರಿಲ್ಲದ ಈ ಜಗತ್ತಲ್ಲಿ ಹಸಿದು ಹಸಿದು ಒಂದಲ್ಲ ಒಂದು ದಿನ ಸಾಯುವುದು ಖಂಡಿತ. ಅಷ್ಟರವರೆಗೆ ಯಾಕೆ ಕಾಯಬೇಕು ಎನಿಸಿತ್ತಾಕೆಗೆ.

ಹೆಣ್ಮಕ್ಕಳ ಜೀವನವೇ ಇಷ್ಟು. ಒಂದು ದೊಡ್ಡಮನೆಯ ಹಿರಿಯ ಹೆಂಗಸು ರುದ್ರಿಯ ಪೂರ್ತಿಕತೆ ಕೇಳಿಸಿಕೊಂಡಿತ್ತು. 'ನಾಳೆ ಬೆಳಗ್ಗೆ ಬಾ. ಯಜಮಾನರು ಇರ್ತಾರೆ, ಮನೆಗೆಲಸಕ್ಕೆ ಒಬ್ಬಳು ಬೇಕು, ಕೆಲಸ ಜಾಸ್ತಿ, ಆದರೆ ನಿನಗೂ ಮಕ್ಕಳಿಗೂ ಹೊಟ್ಟೆ ಹಸಿವೆಗೆ ಒಂದು ದಾರಿಯಾಗುತ್ತದೆ' ಅಂದಿದ್ದರು. ಇವತ್ತಿಗೆ ಏನಾರ ಕೊಡಿಯಮ್ಮ, ನಾಳೆ ಅದರ ಹಣ ಮುರಿದುಕೊಳ್ಳಿ... ಅಂದಾಗ 'ಸಾಲ, ಭಿಕ್ಷೆ ಕೇಳಬೇಡ. ಕಟ್ಟುಕತೆ ಹೇಳುವ ಭಿಕ್ಷುಕರಿಗೆಲ್ಲ ದಾನ ಮಾಡ್ತಿದ್ದಾಳೆ ಅಂತ ಯಜಮಾನರು ನನ್ನನ್ನು ಸಿಗಿದು ಹಾಕಿ ಬಿಟ್ಟಾರು. ನಾಳೆ ನಿನ್ನನ್ನು ಬರುತ್ತಲೇ ಗೇಟಿನ ಹೊರಗೆ ದೂಡಿಸಿ ಬಿಟ್ಟಾರು. ಕೊಡೋದಕ್ಕೆ ನನ್ನದ್ದು ಅಂತ ಇಲ್ಲೇನೂ ಇಲ್ಲ. ಎಲ್ಲ ಅವರದ್ದು. ಅವರು ನಿರ್ಧಾರ ಮಾಡಬೇಕು. ನಿನ್ನ ಕಷ್ಟದ ಕತೆ ನಿಜವಿರಬಹುದು ಅಂತ ಹೇಳಿದ್ದು ನಾನು. ನನ್ನೆಜಮಾನರು ನನ್ನನ್ನೇ ದಬಾಯಿಸುತ್ತಾರೇನೋ ಎನ್ನುವ ಹೆದರಿಕೆಯಿದ್ದರೂ ಹೇಳಿದ್ದೇನೆ... ಹೇಳಿದಷ್ಟು ಮಾಡು, ನಾಳೆ ಬೆಳಿಗ್ಗೆ ಬಾ, ನೋಡೋಣ' ಅಂದಿದ್ದರು. ಅಷ್ಟು ದೊಡ್ಡ ಮನೆ, ಅಲ್ಲಿಯೂ ಅವರ ಕೈಯಲ್ಲೂ ಏನೂ ಇಲ್ಲವೇ?

ಆ ಹೆಂಗಸಿನ ಮಾತು ಕೇಳಿದಾಗ ರುದ್ರಿಗೆ ತನ್ನ ಗಂಡನ ಮೇಲಿದ್ದ ಅಸಾಧ್ಯ ಕೋಪ ಕಡಿಮೆಯಾಗಿತ್ತು. ಏನೂ ಇಲ್ಲದವ ಆತ, ನನಗೇನು ಮಹಾ ಕೊಟ್ಟಾನು? ದುಡಿದು ತರುತ್ತೇನೆ ಎಂದು ಆತ ಹೋಗಿದ್ದ. ಹಿಂತಿರುಗಿ ಬಾರದೆ ಮೂರು ದಿನವಾಗಿತ್ತು. ಕಾಸಿಲ್ಲದೆ ಹೇಗೆ ಹೆಂಡತಿ ಮಕ್ಕಳ ಮುಖ ನೋಡುವುದು ಎಂದು ಎಲ್ಲೋ ಮಲಗಿಕೊಂಡಿರಬೇಕು... ನಿನ್ನೆ ಸ್ವಂತ ತಮ್ಮನನ್ನು ಹುಡುಕಿ ಹೋಗಿ ಹೇಳಿದ್ದಳು. 'ನಮಗೇ ಇಲ್ಲಿ ಏನೂ ಇಲ್ಲ, ಇನ್ನು ಇವಳದ್ದೊಂದು ಕಣ್ಣುಕಟ್ಟು' ಅಂದಳು ನಾದಿನಿ. 'ನಾಳೆ ಬೆಳಗ್ಗೆ ಏನಾದರೂ ಮಾಡುತ್ತೇನೆ' ಅಂದಿದ್ದ ತಮ್ಮ ಬಂದಾನೆಂದು ಬೆಳಿಗ್ಗೆ ಸಾಕಷ್ಟು ಸಮಯ ಕಾದಿದ್ದಳು. ಅವನು ಬರದಿದ್ದಾಗ ಮಕ್ಕಳ ಅಳು, ಜೋಲು ಮೋರೆ ನೋಡಲಾಗದೆ ತಾನೇ ಏನಾದರೂ ಮಾಡಬೇಕೆಂದು ಗುಡಿಸಲು ಬಿಟ್ಟು ಬಂದಿದ್ದಳು.

ರುದ್ರಿಗೆ ಹಸಿವಾಗುತ್ತಿತ್ತು. ನಡೆದು ನಡೆದು ಸುಸ್ತಾಗಿತ್ತು. ಆ ಕ್ಷಣಕ್ಕೆ ತಲೆಗೆ ಬಂದ ವಿಚಾರ ಬದುಕಿದ್ದು ಸಾಕು, ಸಾಯುವುದೇ ವಾಸಿ. ಒಂದಲ್ಲ ಒಂದು ದಿನ ಎಲ್ಲರೂ ಸಾಯುವವರೇ. ಇವತ್ತೇ ನರಕಯಾತನೆಯಿಂದ ಮುಕ್ತಿ ಪಡೆದುಕೊಳ್ಳುತ್ತೇನೆ... ಅಂದುಕೊಂಡಳು. ಕಣ್ಣೆದುರಿಗೆ